Geetha Shishu Shikshana Sangha (R)

**SIMHA SUBBAMAHALAKSHMI FIRST GRADE COLLEGE**

**KRS ROAD, MYSURU-570 016**

# ಯಶಸ್

**Volume – 1 Issue No.– 3**

# YASHAS

**15th June 2019**

**A SSFGC weekly news letter**

## Personality Development and Orientation Programme



Personality development and orientation programme was held on 10th June 2019 in the seminar Hall between 9.30 am and 4.30 pm.

Registrations were done by Smt. Poornima K and Smt. Savitha at 9.30am.

The programme started at 10.00 am with an invocation of Lord Ganesha by Ms Mamatha, student of II B.Com followed by lighting the lamp by the director, Faculty members and the students Ms.Chandana and Mr. Mohammed Wasim, who were the first ones to register their names for the programme.



In his Initial Remarks, the Director Dr. Prabhakara K V stressed the need for organizing such a Programme to acquaint the students with the rules and regulations of the college, their duties and responsibilities, Psychological support to address adolescent issues, Legal awareness to make them law abiding citizens, food for thought through "Ethics In Life" and also a workshop on Personality Development and Leadership to create opportunity by making oneself identifiable.

The Principal spoke about the college rules and regulations. Sri Harish Gowda, Physical Education Director spoke about the importance of ‘A Sound mind in a Sound body’, followed by a brief talk on NSS and environment by Ms Priyanka M N, Asst Prof, Dept of Commerce.

In the Psychological Interventions Dr Bharathi spoke about the various psychological, family and emotional issues. She addressed the various problems of depression, anxiety and a state of confusion commonly found in the adolescent state, how to resolve such problems and also offered to counsel if any of the students were facing such bouts of depression and anxiety.

In the Legal Awareness slot Smt. Amulya Dechakka briefed students about the four types of laws i.e Criminal, Civil, Common and Statutory. The various punishable offences like Trolling, Eve teasing, Defamation, Cyber Crimes, Cyber Bully, Cyber Hijacking, Cyber Hacking, Salaami Accounts, Data Diddling, Stalking, Rights of Women, Phishing and also the types of punishment for various crimes. She concluded her talk after explaining the traffic rules, anti-Ragging Laws and also the need to have 100% attendance.

Rat - Cat Theory or 3 “F”s theory, bless and bliss, glimpses of Gita, a new interpretation of the word LIFE which stands for Loyalty, Integrity, Forgiveness and Empathy were the main contents of “Ethics For Life” segment by Sri Chandrashekar.

The Director gave us an introduction to the Add-On-Courses, To Gather and The Forum followed by Lunch Break.

Dr Indrani M R in her Workshop on Personality Development extolled the importance of having a well groomed personality, factors which enhance the personality, positive attitude, social skills and leadership qualities. She winded up her talks by making a strong statement “When you FOCUS on what you want everything will fall in its place”.

Student Parliament was a witness to the emergence of Prime Monitor and Deputy Prime Monitor –Darshan of III Bcom and Jeevitha of I BCA as students’ leaders.

After tea break interaction programme with management, students, Parents, Alumni, Principal and Staff was held it was followed by feed back from students. Finally the day long programme concluded with the rendering of the National Anthem. The programme was attended by fifty students and was visited by Hon. Secretary and AO of GSSS group of institutions.

**-Smt. Poornima K**
Head of the Dept.
Commerce

# ಮೌಲ್ಯಯುತ ಶಿಕ್ಷಣದ ಜೊತೆ ಉದ್ಯೋಗವನ್ನು ಕಲ್ಪಿಸುವುದೇ ನಮ್ಮ ಉದ್ದೇಶ

### ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕರಾದ ಡಾ. ಪ್ರಭಾಕರ ಕೆ. ವಿ

ದಿನಾಂಕ 10 ಜೂನ್ 2019 ರಂದು ಜಿಎಸ್‌ಎಸ್‌ಎಸ್‌ನ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಒಂದು ದಿನದ **Personality Development and Orientation Programme** ಅನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿಚಾರ, ಚಿಂತನೆ ಮತ್ತು ಸಂವಾದಗಳೊಂದಿಗೆ ಹಲವು ಚಟುವಟಿಕೆಗಳು ನಡೆದವು.



"ಸುಸಂಸ್ಕೃತವಾದ ಸಮಾಜವನ್ನು ಕಟ್ಟುವ ಹೆಚ್ಚಿನ ಜವಾಬ್ದಾರಿ ಇಂದಿನ ವಿದ್ಯಾರ್ಥಿಗಳ ಮೇಲಿದೆ. ಯುವ ಸಮುದಾಯದವರು ಮತ್ತು ವಿದ್ಯಾರ್ಥಿಗಳು ಈ ಜವಾಬ್ದಾರಿಯನ್ನು ಹೊರುವಂತೆ ಅಗತ್ಯವಾದ ಮೌಲ್ಯ, ನೈತಿಕ ಪ್ರಜ್ಞೆ ಸಂವಿಧಾನಿಕ ಹಕ್ಕುಗಳ ಅರಿವು, ನಮ್ಮ ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ರೀತಿ ನೀತಿಯ ವಿಚಾರಗಳನ್ನು ಅರಿತುಕೊಳ್ಳುವಂತೆ ಮಾಡುವ ಪ್ರಯತ್ನವನ್ನು ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು ಮಾಡುತ್ತಿದೆ" ಎಂದು ಕಾಲೇಜಿನ ನಿರ್ದೇಶಕರಾದ ಡಾ. ಪ್ರಭಾಕರ ಕೆ. ವಿ. ಅವರು ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕ ಮಾತುಗಳೊಂದಿಗೆ ನುಡಿದರು.

ನಂತರ ಕಾರ್ಯಕ್ರಮದಲ್ಲಿ **Add-on-Course, To gather** ಮತ್ತು **The Forum** ಬಗ್ಗೆ ತಿಳಿಸಿಕೊಡುತ್ತಾ ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಪಠ್ಯೇತರ ಚಟುವಟಿಕೆಯಲ್ಲಿಯೂ ಭಾಗವಹಿಸಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ. ಈ ಹಿನ್ನೆಲೆಯಲ್ಲಿ **The Forum** ಎಂಬ ವೇದಿಕೆಯೊಂದನ್ನು ವಿದ್ಯಾರ್ಥಿಗಳಿಗೆ ಮೀಸಲಾಗಿರಿಸಲಾಗಿದೆ. ಇವು ವಿದ್ಯಾರ್ಥಿಗಳಲ್ಲಿ ಶಿಸ್ತಿನ ವ್ಯಕ್ತಿತ್ವ ಬೆಳೆಯಲು ಪೂರಕವಾಗಿರುತ್ತವೆ. ನಂತರ **Add-on-Course** ಗಳ ಮಹತ್ವವನ್ನು ವಿವರಿಸುತ್ತಾ, ವಿದ್ಯಾರ್ಥಿಗಳು ಸ್ವಾವಲಂಬಿಗಳು, ಉದ್ಯೋಗಸ್ಥರಾಗಲು ಮತ್ತು ಹೆಚ್ಚಿನ ಜ್ಞಾನವನ್ನು ತಿಳಿದುಕೊಳ್ಳುವುದಕ್ಕೆ **Add-on-Course** ಗಳ ಅಗತ್ಯವಿದೆ. ಇದನ್ನು ಕಾಲೇಜು ವಿಶೇಷವಾಗಿ ವಿದ್ಯಾರ್ಥಿಗಳಿಗೆ ಒದಗಿಸಿಕೊಟ್ಟಿರುವ ಅವಕಾಶ; ಇದನ್ನು ಎಲ್ಲಾ ವಿದ್ಯಾರ್ಥಿಗಳು ಸದುಪಯೋಗಪಡಿಸಕೊಳ್ಳಬೇಕೆಂದು ಕರೆ ನೀಡಿದರು.

ನಂತರ ವಿದ್ಯಾರ್ಥಿಗಳು ಮತ್ತು ಅವರ ಪೋಷಕರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪೋಷಕರೊಬ್ಬರು ಕ್ಯಾಂಪಸ್ ಸೆಲೆಕ್ಷನ್, ವಿದ್ಯಾರ್ಥಿಗಳ ಔದ್ಯೋಗಿಕ ಭದ್ರತೆಯ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ "ಮೌಲ್ಯಯುತ ಶಿಕ್ಷಣದ ಜೊತೆ ಉದ್ಯೋಗವನ್ನು ಕಲ್ಪಿಸುವುದೇ ನಮ್ಮ ಉದ್ದೇಶ. ಈ ಹಿನ್ನೆಲೆಯಲ್ಲಿ ಪಠ್ಯದ ಜೊತೆ **Add-on-Course** ಗಳಾದ **Banking and Insurance, Agri-commerce** ಮತ್ತು **Software development** ಗಳನ್ನು ಈ ವರ್ಷದಿಂದ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದನ್ನು ಎಲ್ಲಾ ವಿದ್ಯಾರ್ಥಿಗಳು ಸದುಪಯೋಗ

ಪಡಿಸಿಕೊಂಡು ಉದ್ಯೋಗಾರ್ಹತೆಯನ್ನು ಹೆಚ್ಚಿಸಿಕೊಂಡು ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ ಎಂದು ತಿಳಿಸಿದರು.



ಚಿತ್ರ: **Add-on-Course** ಬಗ್ಗೆ ಶ್ರೀ ಎಚ್. ವೈ. ವೆಂಕಟೇಶ್ ಅವರು ವಿದ್ಯಾರ್ಥಿಗಳಿಗೆ ಮಾಹಿತಿಗಳನ್ನು ತಿಳಿಸಿ, ಅದರ ಮಹತ್ವವನ್ನು ವಿವರಿಸಿದರು.



ನಂತರ **Psychological Intervention –** ಕುರಿತು ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಡಾ. ಭಾರತಿಯವರು "ಮಾನವನ ಬದುಕು ಬಲುದೊಡ್ಡದು ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಿ. ಈ ಯೌವನಾವಸ್ಥೆಯಲ್ಲಿ ಮಾನಸಿಕ ಒತ್ತಡಗಳು ಉಂಟಾಗುವುದು ಸಹಜ. ಭಾರತದಲ್ಲಿ ಯೌವನಾವಸ್ಥೆ 12 ರಿಂದ 24 ರವರೆಗೆ ಇರುತ್ತದೆ. ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಗೆ ಬರುವ ಹುಡುಗ ಹುಡುಗಿಯರಿಗೆ ಹಲವು ರೀತಿಯ ಗೊಂದಲಗಳಿರುತ್ತವೆ. ಈ ಸಂದರ್ಭದಲ್ಲಿ ಹಾರ್ಮೋನ್ ವ್ಯತ್ಯಾಸಗಳಿಂದ ಮಾನಸಿಕವಾಗಿ ಕಿರಿಕಿರಿ, ಕಿನ್ನತೆ ಮತ್ತು ಒತ್ತಡದಂತಹ ಹಲವು ಮಾನಸಿಕ ಸಮಸ್ಯೆಗಳು ಉಂಟಾಗುವ ಸಾಧ್ಯತೆಗಳಿವೆ. ಇವುಗಳನ್ನು ತಾಳ್ಮೆಯಿಂದ ಆರೋಗ್ಯಕರವಾಗಿ ನಿವಾರಿಸಬೇಕು. ಇಂತಹ ಸಂದರ್ಭದಲ್ಲಿ ಅವುಗಳನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಎಲ್ಲರೂ ಮಾಡಬೇಕಾಗಿದೆ. ಮುಖ್ಯವಾಗಿ ಈ ಯೌವನಾವಸ್ಥೆಯಲ್ಲಿ ವಿದ್ಯಾರ್ಥಿಗಳು ಶಿಸ್ತು ಮತ್ತು ಸಂಯಮದ ಗುಣವನ್ನು ಕಾಯ್ದುಕೊಳ್ಳಬೇಕು" ಎಂದು ಅವರು ಹೇಳಿದರು.



ನಂತರ **Legal Awareness–** ಕುರಿತು (ಕಾನೂನು ಅರಿವು) ವಿದ್ಯಾರ್ಥಿಗಳಿಗೆ ತಿಳಿಸಿ ಕೊಟ್ಟ ವಕೀಲರಾದ ಶ್ರೀಮತಿ ಅಮೂಲ್ಯ ದೇಚಕ್ಕ – ಕಾಯ್ದೆಗಳ ಅರಿವು ವಿದ್ಯಾರ್ಥಿಗಳಿಗೆ ಇರಬೇಕೆಂದು ಕ್ರಿಮಿನಲ್ ಕಾಯ್ದೆ, ಸಿವಿಲ್ ಕಾಯ್ದೆ, ಸಾಮಾನ್ಯ ಕಾಯ್ದೆ ಬಗ್ಗೆ ಮಾತನಾಡಿದರು. ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ವಿದ್ಯಾರ್ಥಿಗಳ ಸಾಕಷ್ಟು ಎಚ್ಚರಿಕೆ ವಹಿಸಬೇಕು ಎಂದು ಹೇಳುತ್ತಾ, ಅದರ ಬಳಕೆ ಮತ್ತು ದುರ್ಬಳಕೆ ಸಾಧ್ಯತೆಗಳು, ಅದಕ್ಕೆ ಕಾನೂನಾತ್ಮಕವಾಗಿ ಇರುವ ಶಿಕ್ಷೆಗಳನ್ನು ತಿಳಿಸಿಕೊಟ್ಟರು. ರ್‍ಯಾಗಿಂಗ್, ಮಾನನಷ್ಟ ಮೊಕದಮ್ಮೆ, ಸೈಬರ್ ಕ್ರೈಂ, ಸೈಬರ್ ಬುಲ್ಲಿಯಿಂಗ್, ಸೈಬರ್ ಹೈಜಾಕ್, ಸಲಾಮಿ ಕಾಯ್ದೆ, ಸಂಚಾರಿ ನಿಯಮಗಳು, ಬಸ್ ಪ್ರಯಾಣದಲ್ಲಿ ಎದುರಾಗುವ ಸಮಸ್ಯೆಗಳು ಮುಂತಾದ ವಿಚಾರಗಳನ್ನು ನಿದರ್ಶನ ಸಹಿತವಾಗಿ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುತ್ತಾ ಅಂತಹ ಸಂದರ್ಭದಲ್ಲಿ ಅನುಸರಿಸಬೇಕಾದ ಎಚ್ಚರಿಕೆಯ ಕ್ರಮಗಳನ್ನು ತಿಳಿಸಿಕೊಟ್ಟ ಅವರು, ಹೇಗೆ ರ್‍ಯಾಗಿಂಗ್ ಅಮಾನವೀಯವಾದ ಅಪರಾಧ, ವಿದ್ಯಾರ್ಥಿಗಳ ಹಾಜರಾತಿ 100% ಇರಬೇಕಾದ ಅಗತ್ಯ ಮತ್ತು ಕಾನೂನಿನ ಅನಿವಾರ್ಯತೆ ಎಂಬುದನ್ನು ವಿವರಿಸಿದರು.



ಡಾ. ಚಂದ್ರಶೇಖರ್ ಅವರು **Ethics in Life –** ಎಂಬ ವಿಷಯ ಕುರಿತು ಮಾತನಾಡುತ್ತಾ ಸುಂದರ ಬದುಕಿಗೆ ನೈತಿಕತೆಯೇ ಆಧಾರ. ಅದನ್ನು ವಿದ್ಯಾರ್ಥಿ ಜೀವನದಿಂದಲೇ ಅರ್ಥಮಾಡಿಕೊಂಡು ರೂಢಿಸಿಕೊಳ್ಳಬೇಕು. ಆಶೀರ್ವಾದ ಮತ್ತು ಆನಂದಾನುಭೂತಿಗಳ ನಡುವೆ ಸುಂದರ ಜೀವನವಿದೆ. ಅದನ್ನು ನೈತಿಕತೆ, ಪ್ರಾಮಾಣಿಕತೆ

ಮತ್ತು ಪರಿಶ್ರಮದಿಂದ ಪಡೆದುಕೊಳ್ಳಬೇಕಾಗುತ್ತದೆ. ಜೀವನವೆಂದರೆ ನಿಷ್ಠೆ, ಪ್ರಾಮಾಣಿಕತೆ, ಪರಿಶ್ರಮ ಮತ್ತು ಸಹಾನುಭೂತಿಯಿಂದ ಕೂಡಿರುವಂತಹದ್ದು. ಇವುಗಳಿಂದ ನಮ್ಮ ವ್ಯಕ್ತಿತ್ವ ತುಂಬಿರಲಿ ಎಂದು ತಿಳಿಸಿದರು.



**Personality Development –** ಕಾರ್ಯಗಾರ ನಡೆಸಿಕೊಟ್ಟ ಡಾ. ಇಂದ್ರಾಣಿ. ಎಂ. ಆರ್ ಅವರು "ನಮ್ಮನ್ನು ನಾವು ಗುರುತಿಸಿಕೊಳ್ಳುವುದಕ್ಕೆ ಮತ್ತು ನಾವೇ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವುದಕ್ಕೆ ಉತ್ತಮ ವ್ಯಕ್ತಿತ್ವನ್ನು ಹೊಂದಿರಬೇಕು. ಈ ವಿದ್ಯಾರ್ಥಿ ಜೀವನದಲ್ಲಿ ದಿನನಿತ್ಯ ಏನು ಮಾಡಬೇಕು, ಏನು ಮಾಡಬಾರದು ಎಂಬ ಅರಿವನ್ನು ಹೊಂದಿರಬೇಕು. ಇನ್ನೊಬ್ಬರ ಚಿಂತನೆಗಳನ್ನು ಗೌರವಿಸುವ ಮನೋಭಾವ ವಿದ್ಯಾರ್ಥಿಗಳಲ್ಲಿ ಇರಬೇಕು. ಒಂದು ನಿದಿಷ್ಟವಾದ ವ್ಯಕ್ತಿತ್ವದೊಂದಿಗೆ, ಅಗಾಧವಾದ ಸೃಜನಶೀಲತೆ ಇರುತ್ತದೆ. ಆದರೆ ಅದನ್ನು ಇಂದು ತರಗತಿಯ ಕೊಠಡಿಗೆ ಸೀಮಿತಗೊಳಿಸದೆ ಅವುಗಳಿಗೆ ವೇದಿಕೆಯೊಂದನ್ನು ಕಲ್ಪಿಸಬೇಕು. ವಿದ್ಯಾರ್ಥಿಗಳಿಗೆ ಪ್ರತಿದಿನವೂ ಪ್ರತಿಕ್ಷಣವೂ ಸವಾಲುಗಳು ಇರುತ್ತವೆ. ಅವುಗಳನ್ನು ಆತ್ಮವಿಶ್ವಾಸದಿಂದ ಗೆಲ್ಲಬೇಕು. ಆತ್ಮವಿಶ್ವಾಸವೇ ನಮ್ಮ ನಿಜವಾದ ಶಕ್ತಿ. ಸಕಾರಾತ್ಮಕವಾದ ಆಲೋಚನೆ, ಉತ್ತಮ ಸಂವಹನ ಶೈಲಿ, ಉತ್ತಮ ನಡವಳಿಕೆ, ಉತ್ತಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿಕೆ ಮುಂತಾದವುಗಳ ನಿಮ್ಮ ವ್ಯಕ್ತಿತ್ವದ ಮುಖ್ಯ ಭಾಗಗಳಾಗಿರಲಿ ಎಂದು ಆಶಿಸಿದರು.



ನಂತರ **Workshop on Leadership –** ಕುರಿತು ಮಾತನಾಡಿ, 'ವಿದ್ಯಾರ್ಥಿ ಸಂಸತ್ತು' ರಚನೆಯನ್ನು ಪ್ರಾತ್ಯಕ್ಷತೆಯ ಮೂಲಕ ಅದರ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.




ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಆರ್. ಗುಣವತಿಯವರು ಕಾಲೇಜಿನ ನೀತಿ ನಿಯಮಗಳೆಲ್ಲವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಾ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿದ್ಯಾರ್ಥಿ ಜೀವನವನ್ನು ಯಶಸ್ಸಿನ ಹಾದಿಯ ಕಡೆ ತಿರುಗಿಸಿ ಎಂದು ಹೇಳಿದರು.



ರಾಷ್ಟ್ರೀಯ ಸೇವಾ ಯೋಜನೆ ಘಟಕದ (NSS) ಅಧಿಕಾರಿಗಳಾದ ಕು. ಪ್ರಿಯಾಂಕ ಎಂ. ಎನ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ – ರಾಷ್ಟ್ರೀಯ ಸೇವಾ ಯೋಜನೆಯ ಹಿಂದಿನ ಉದ್ದೇಶ, ಧ್ಯೇಯ ಮತ್ತು ಅದರ ಮಹತ್ವವನ್ನು ತಿಳಿಸಿದರು. ಸೇವಾ ಮನೋಭಾವದಿಂದ ಸಮಾಜದ ಆರೋಗ್ಯವನ್ನು ಕಾಪಾಡುವುದು ಇಂದಿನ ಯುವ ಪೀಳಿಗೆಯ ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ. 'ನನಗಲ್ಲ, ನಿನಗೆ' (Not me, But for you) ಎಂಬ ಧ್ಯೇಯ ವಾಕ್ಯವನ್ನು ಸದಾ ಮನದಲ್ಲಿ ನೆನೆಯುತ್ತಾ ನಿಸ್ವಾರ್ಥ ಸೇವಾ ಮನೋಭಾವದಿಂದ ಸೇವೆಯನ್ನು ಮಾಡಿ ಆರೋಗ್ಯವಂತ ಸಮಾಜವನ್ನು ನಾನಾ ವಿಧದಲ್ಲಿ ಕಟ್ಟುವ ಜವಾಬ್ದಾರಿ ನಮ್ಮದಾಗಿದೆ ಎಂದು ಅವರು ತಿಳಿಸಿದರು. ಈ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿರುವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯು 2017–18 ರಿಂದ ಮೈಸೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ ಸ್ವಾವಲಂಬಿ ಆರ್ಥಿಕ ಘಟಕವಾಗಿ ಸ್ಥಾಪಿತವಾಗಿರುವುದು ವಿಶೇಷವೆಂದು ತಿಳಿಸಿದರು. ನಂತರ ರಾಷ್ಟ್ರೀಯ ಸೇವಾ ಯೋಜನೆಯ ಇತರ ಸಾಧನೆಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.




**ಪರಿಸರ ಸಂರಕ್ಷಣೆ ಪ್ರತಿಜ್ಞಾ ವಿಧಿ**


ಮನುಕುಲದ ಉಳಿವಿಗೆ ಪರಿಸರದ ಸಂರಕ್ಷಣೆ ಅಗತ್ಯ ಎಂದು ನಾನು ಅರಿತಿದ್ದೇನೆ. ನಮಗಿರುವ ಒಂದೇ ಭೂಮಿ, ನೆಲ, ಜಲ, ಪ್ರಾಣಿ, ಪಕ್ಷಿ, ಮರ, ಗಿಡ ಮತ್ತು ವಾತಾವರಣದ ಸುರಕ್ಷತೆಯನ್ನು ಖಾತರಿ ಪಡಿಸಲು ನಾನು ಬದ್ಧನಾಗಿದ್ದೇನೆ. ನನ್ನ ಪರಿಸರ ಕಾಳಜಿಗೆ ಸಾಕ್ಷಿಯಾಗಿ ಕನಿಷ್ಠ ನಾಲ್ಕು ಮರಗಳನ್ನು ನೆಟ್ಟು, ಪೋಷಿಸಿ ಕಾಪಾಡುತ್ತೇನೆ ಎಂದು ನನ್ನ ಆತ್ಮಸಾಕ್ಷಿಯಾಗಿ ಈ ದಿನ ಪ್ರತಿಜ್ಞೆ ಮಾಡುತ್ತೇನೆ.

ನಂತರ 'ಪರಿಸರ ಕಾಳಜಿ'ಯ ಕುರಿತು ಮಾತನಾಡಿ ಪರಿಸರ ಕಾಳಜಿಯ ಬಗೆಗಿನ ಪ್ರಜ್ಞೆ ನಮ್ಮಲ್ಲಿ ಸದಾ ಜಾಗೃತವಾಗಿರಬೇಕೆಂದು – ಒಬ್ಬರಿಗೆ ನಾಲ್ಕು ಹೊಂಗೆ ಮರದ ಬೀಜಗಳನ್ನು ವಿದ್ಯಾರ್ಥಿಗಳೆಲ್ಲರಿಗೂ ನೀಡಿ ಪರಿಸರ ಕಾಳಜಿಯ ಕುರಿತು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ವಿದ್ಯಾರ್ಥಿಗಳೆಲ್ಲರೂ ಅವುಗಳನ್ನು ಸಂರಕ್ಷಿಸಿ ಬೆಳೆಸುವುದಕ್ಕೆ ಸಂಕಲ್ಪ ಮಾಡಿ ಸಂತೋಷದಿಂದ ಸ್ವೀಕರಿಸಿದರು.

ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾದ ಶ್ರೀ ಅನಿಲ್ ಅವರು ಕಾರ್ಯಕ್ರಮವನ್ನು ನಿರೂಪಣೆಯ ಮೂಲಕ ಅಚ್ಚುಕಟ್ಟಾಗಿ ನೆಡಸಿಕೊಟ್ಟರು. ದ್ವಿತೀಯ ಬಿ. ಕಾಂ ವಿದ್ಯಾರ್ಥಿನಿ ಕು. ಮಮತಾ ಅವರು ಸುಮಧುರ ಹಾಡಿನ ಮೂಲಕ ಮತ್ತು ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿ ಪ್ರತಿನಿಧಿಗಳೆಲ್ಲರೂ ಪ್ರೊ. ಬಿ. ಎಸ್. ಪಂಡಿತ್ ಅವರ ಭಾವಚಿತ್ರಕ್ಕೆ ಪುಷ್ಪಗಳನ್ನು ಅರ್ಪಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



## ಗಿರೀಶ್ ಕಾರ್ನಡ್ ಅವರಿಗೆ ನುಡಿನಮನ




ಗಿರೀಶ್ ಕಾರ್ನಾಡ್ ಕನ್ನಡ ಸಾಹಿತ್ಯ ಲೋಕ ಕಂಡ ಅದ್ಭುತ ನಾಟಕಕಾರ, ಸಾಹಿತಿ, ಚಿತ್ರನಟ ಮತ್ತು ನಿರ್ದೇಶಕ. ಕನ್ನಡ, ಹಿಂದಿ, ತೆಲಗು, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ತಮ್ಮ ಅಭಿನಯದಿಂದ ವಿಶಿಷ್ಟ ಮುದ್ರೆ ಒತ್ತಿರುವ ಇವರು ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಏಳನೇ ಸಾಹಿತಿ. ಪ್ರಗತಿಶೀಲ, ಸಮತಾವಾದ ಮತ್ತು ಜಾತ್ಯಾತೀತವಾದ ಪ್ರತಿಪಾದನೆ ಅವರ ವ್ಯಕ್ತಿತ್ವದಲ್ಲಿ, ಬದುಕಿನ ಶೈಲಿಯಲ್ಲಿ ವಿಶೇಷವಾಗಿ ಕಂಡುಬರುತ್ತಿದ್ದ ಅಂಶಗಳು. ಇವರು ದಿನಾಂಕ ಜೂನ್ 10, 2019 ರಂದು ನಿಧನರಾದರು. ಶ್ರೀಯುತರಿಗೆ ನಮ್ಮ ಕಾಲೇಜಿನಿಂದ ನುಡಿನಮನವನ್ನು ಅರ್ಪಿಸಲಾಯಿತು. ಕಾಲೇಜಿನ ನಿರ್ದೇಶಕರಾದ ಡಾ. ಪ್ರಭಾಕರ ಕೆ. ವಿ ಅವರು ಗಿರೀಶ್ ಕಾರ್ನಾಡರ ಸಾಧನೆ ಮತ್ತು ವ್ಯಕ್ತಿತ್ವವನ್ನು ಕುರಿತು ಮಾತನಾಡಿದರು.

# ಆಡಳಿತಾಧಿಕಾರಿಗಳೊಂದಿಗೆ ಸಭೆ





ದಿನಾಂಕ 13 ಜೂನ್ 2019 ರಂದು ಜಿಎಸ್ಎಸ್ಎಸ್‌ನ ಆಡಳಿತಾಧಿಕಾರಿಗಳಾದ (AO) ಶ್ರೀಮತಿ ಅನುಪಮ ಬಿ. ಪಂಡಿತ್ ಅವರು ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ನಿರ್ದೇಶಕರು, ಪ್ರಾಂಶುಪಾಲರು ಮತ್ತು ವಿಭಾಗದ ಎಲ್ಲಾ ಪ್ರಾಧ್ಯಾಪಕರೊಂದಿಗೆ ಸಮಾಲೋಚನೆ ನಡೆಸಿದರು. ಈ ಸಭೆಯಲ್ಲಿ ಪ್ರಾಂಶುಪಾಲರು ಕಾಲೇಜಿನಲ್ಲಿ ನಡೆದ ಒಂದು ವಾರದ ಕಾರ್ಯಚಟುವಟಿಕೆಗಳ ವರದಿಯನ್ನು ಮಂಡಿಸಿದರು. ನಂತರ ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಮಪ ಬಿ. ಪಂಡಿತ್ ಅವರು ತಮ್ಮ ಸಂಸ್ಥೆಯ ಶಿಸ್ತು, ಸಮಯಪ್ರಜ್ಞೆ ಮತ್ತು ಮುಂದಿನ ಕಾರ್ಯಚಟುವಟಿಕೆಗಳನ್ನು ಕುರಿತು ಅಗತ್ಯ ಸಲಹೆ ಸೂಚನೆ ಮತ್ತು ಮಾರ್ಗದರ್ಶನವನ್ನು ನೀಡಿದರು.

---

## Photo Gallery





ದಿನದ ಆರಂಭ – To Gather ನಲ್ಲಿ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಸಿಬ್ಬಂದಿಗಳು ಜೂನ್ 11, 2019





ದೈನಂದಿನ, The Forum ನಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿರುವುದು – ಜೂನ್ 11, 2019





**Add-On-Course** ತರಗತಿಗಳಿಗೆ ಚಾಲನೆ ನೀಡಿ, ಮೊದಲ ತರಗತಿಯನ್ನು ನಡೆಸಿಕೊಡುತ್ತಿರುವ ಸಂಪನ್ಮೂಲವ್ಯಕ್ತಿಗಳಾದ ಶ್ರೀ ಎಚ್. ವೈ. ವೆಂಕಟೇಶರಾವ್ – ಜೂನ್ 11, 2019

**ವರದಿಗಾರರು**

ಡಾ. ಬಿ. ಎಸ್. ಸುದೀಪ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಶ್ರೀಮತಿ ಕೆ. ಪೂರ್ಣಿಮ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ

**ಛಾಯಾಚಿತ್ರ ಕೃಪೆ**

ಡಾ. ಬಿ. ಎಸ್. ಸುದೀಪ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಶ್ರೀಮತಿ ಗುಣವತಿ, ಪ್ರಾಂಶುಪಾಲರು

ಕು. ಪ್ರಿಯಾಂಕ. ಎಂ. ಎನ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ